## ರೊಟ್ಟಿ ಹಬ್ಬ

‘ಸೋಲಿಗರ ರೊಟ್ಟಿ ಹಬ್ಬ’, ವಿಶ್ವಾಸ್ ಭಾರದ್ವಾಜ್ (ಜನವರಿ 21ರ ಸಂಚಿಕೆ) ಬರೆದಿರುವ ಲೇಖನ ಸೊಗಸಾಗಿದೆ. ಚಾಮರಾಜನಗರ ಜಿಲ್ಲೆಯ ಸುತ್ತಮುತ್ತ ಸಂಕ್ರಾಂತಿಯಿಂದ ಯುಗಾದಿಯ ತನಕ ಸಂಭ್ರಮದಿಂದ ಆಚರಿಸಲ್ಪಡುವ ರೊಟ್ಟಿಹಬ್ಬ ವನ್ನು ಚಿತ್ತಾಕರ್ಷಕ ಚಿತ್ರಗಳ ಸಹಿತ ಲೇಖಕರು ಸೊಗಸಾಗಿ ಪರಿಚಯಿಸಿದ್ದಾರೆ.

—ಪಿ. ಜಯವಂತ ಪೈ, ಕುಂದಾಪುರ

## ಮಹತ್ವದ ಕೊಡುಗೆ

ಕನ್ನಡದಲ್ಲಿ ವಿಜ್ಞಾನ ಪತ್ರಿಕೆಗಳಿಲ್ಲ ಎನ್ನುವ ಕೊರತೆಯನ್ನು ‘ಸುಧಾ’ ಪತ್ರಿಕೆ ನೀಗಿಸುತ್ತಿದೆ. ಜ. 14ರ ಸಂಚಿಕೆಯಲ್ಲಿ ಗುರುರಾಜ್ ಎಸ್. ದಾವಣಗೆರೆ ಅವರು ಬರೆದ ‘ಅಲ್ಗೊರಿಧರ್ಮ’ದಷ್ಟೇ, ಜ. 28ರ ಸಂಚಿಕೆಯ ‘ರೆಸ್ಟ್ ಇಲ್ಲದ ಎವರೆಸ್ಟ್’ ಲೇಖನವೂ ಸಹ ವಿಜ್ಞಾನ—ತಂತ್ರಜ್ಞಾನ ಸಾರಸ್ವತಕ್ಕೆ ಮಹತ್ತರ ಕೊಡುಗೆ. ‘ಸುಧಾ’ ತಂಡಕ್ಕೆ ಹಾರ್ದಿಕ ಅಭಿನಂದನೆಗಳು.

—ಸುಧೀಂದ್ರ, ಹಾಲ್ದೊಡ್ಡೇರಿ, ಬೆಂಗಳೂರು

ಸಂಜೀವಕುಮಾರ ಅತಿವಾಳೆ, ಬೀದರ

## ಸೈಬರ್ ಕಬಂಧ

ಜ. 21ರ ಸಂಚಿಕೆಯಲ್ಲಿ ಸುಧೀಂದ್ರ ಪ್ರಸಾದ್ ಇ.ಎಸ್. ಅವರ ಮುಖಪುಟ ಲೇಖನ ‘ಸೈಬರ್ ಕಬಂಧ; ನಾವೆಷ್ಟು ಸುರಕ್ಷಿತ’ ಓದಿ ಆಶ್ಚರ್ಯವಾಯಿತು. ನಮಗೇ ಅರಿವಿಲ್ಲದಂತೆ ನಮ್ಮನ್ನು ಯಾಮಾರಿಸುವವರು ಇದ್ದಾರೆಂದು ತಿಳಿದು ಸೋಜಿಗವಾಯಿತು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

ದಿನಪತ್ರಿಕೆಯಲ್ಲಿ ದಿನವೂ ಒಂದೆರಡು ಸುದ್ದಿಗಳಾದರೂ ಸೈಬರ್ ವಂಚನೆಯ ಬಗ್ಗೆಯೇ ಇರುವ ಈ ಕಾಲದಲ್ಲಿ ‘ಸೈಬರ್ ಕಬಂಧ’ ಲೇಖನ ಸಮಯೋಚಿತವಾಗಿತ್ತು. ಸೈಬರ್ ವಂಚನೆಗಳ ಆಳ ಅಗಲಗಳನ್ನು ಒಂದು ಲೇಖನದಲ್ಲಿ ಒಳಗೊಳ್ಳಲು ಅಸಾಧ್ಯವಾದ್ದರಿಂದ ಸರಣಿ ಲೇಖನಗಳನ್ನು ಪ್ರಕಟಿಸುವುದು ಉಪಯುಕ್ತ ವೆಂದು ತೋರುತ್ತದೆ.

---

## ತಿದ್ದುಪಡಿ

ಜ. 28ರ ಸಂಚಿಕೆಯಲ್ಲಿ ಪ್ರಕಟವಾದ ‘ರೆಸ್ಟ್ ಇಲ್ಲದ ಎವರೆಸ್ಟ್’ ಲೇಖನದಲ್ಲಿ ‘1952ರಲ್ಲಿ ಡೆಹರಾಡೂನಿನ ಸರ್ವೇ ಆಫ್ ಇಂಡಿಯಾದ ಕೇಂದ್ರ ಕಚೇರಿಯಲ್ಲಿ ಇದನ್ನು ವಿಶ್ಲೇಷಿಸಲಾಗುತ್ತಿತ್ತು’ ಎಂದಾಗಿದೆ. 1952ರ ಬದಲು 1852 ಎಂದು ಓದಿಕೊಳ್ಳಬೇಕಾಗಿ ಕೋರಿಕೆ.

—ಸಂ.



## ‘ಅಂತರಾಳ’

ಸಿ.ಎನ್.ಮುಕ್ತಾ ಜ. 21ರ ಸಂಚಿಕೆಯಲ್ಲಿ ಬರೆದಿರುವ ‘ಅಂತರಾಳ’ ಕಥೆ ಕಾಲಕ್ಕೆ ತಕ್ಕಹಾಗಿದೆ. ಇಂದಿನ ಯುವಕ, ಯುವತಿಯರ ಮನದಾಳಕ್ಕೆ ಹೊಕ್ಕು ಹಿರಿಯರೇ ತಮ್ಮ ಬದುಕನ್ನು ಅನುಸರಿಸಿಕೊಂಡು ಹೋಗಬೇಕು ಅನ್ನುವುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ಕಥೆಯ ಅಂತ್ಯ ಚೆನ್ನಾಗಿದೆ. ಯಾರ ಸ್ವಾತಂತ್ರ್ಯವನ್ನೂ ಯಾರೂ ಕಸಿದುಕೊಳ್ಳಬಾರದು ಎನ್ನುವುದನ್ನು ಅರ್ಥಮಾಡಿಸಿದ್ದಾರೆ.

—ವಿಜಯ ಗೋಪಾಲರಾವ್

ಅತ್ತೆ, ಸೊಸೆಯ ಮನಸ್ಸನ್ನು ಅರ್ಥ ಮಾಡಿಕೊಂಡು ಮೇಲಿನ ಮನೆಯಲ್ಲಿ ಇರಲು ಹೇಳಿ ತಮ್ಮ ಪ್ರೀತಿ ವಾತ್ಸಲ್ಯವನ್ನು ತೋರಿಸಿದ್ದಾರೆ. ಈಗಿನ ಕಾಲದಲ್ಲಿ ಅತ್ತೆ ಸೊಸೆ ಇಬ್ಬರೂ ಒಬ್ಬರಿಗೊಬ್ಬರು ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾ ಬದುಕಿದರೆ, ಮುಂದೆ ಹುಟ್ಟುವ ಮೊಮ್ಮಕ್ಕಳಿಗೆ ಅಜ್ಜ ಅಜ್ಜಿಯರ ಪ್ರೀತಿಯೂ ಸೇರಿ ಬದುಕು ಬಂಗಾರವಾಗುತ್ತದೆ.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

‘ಅಂತರಾಳ’ ಒಂದು ಸುಂದರ ಸಂಸಾರದ ಚಿತ್ರಣ. ಕಥೆಯ ಎಲ್ಲ ಕ್ರಿಯೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇಂದಿನ ವಾಸ್ತವ ಸ್ಥಿತಿಯನ್ನು, ಒಟ್ಟು ಸಂಸಾರದ ಅಗತ್ಯವನ್ನು ನವಿರಾಗಿ ಹೇಳಿದ್ದಾರೆ. ವಾರಾಂತ್ಯಕ್ಕೆ ಒಂದು ಸೊಗಸಾದ ಕಥೆಯನ್ನು ಓದಿದ ತೃಪ್ತಿಯನ್ನು ಓದುಗನಿಗೆ ನೀಡಿದ್ದಾರೆ.

—ಎಸ್. ಜಿ. ನರಸಿಂಹ ಮೂರ್ತಿ, ಬೆಂಗಳೂರು

ಕಥೆ ಆರಂಭದಲ್ಲಿ ಕಸಿವಿಸಿ ಅನಿಸಿದರೂ ಕೊನೆಯಲ್ಲಿ ಸಿಹಿ ಅನ್ನಿಸಿತು. ಕಾಲ ಬದಲಾಗಿದೆ. ಅತ್ತೆಯವರಲ್ಲೂ ಅಮ್ಮನನ್ನು ಕಾಣಬಹುದು ಎಂಬುವುದನ್ನು ಓದಿ ಬಕುಳಾ ರೀತಿ ನಮ್ಮ ಕಣ್ಣಂಚಲ್ಲೂ ನೀರು ತರಿಸಿತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

ಕಥೆಯಲ್ಲಿ ಬದಲಾವಣೆ ತಂದಿದ್ದರೆ ಚೆನ್ನಾಗಿರುತ್ತಿತ್ತು. ಬಕುಳಾ ತಾಯಿ ಮನೆಯಲ್ಲಿ ಸ್ವೇಚ್ಛೆಯಾಗಿ ಬೆಳೆಸಿದ್ದು ತಂದೆ ತಾಯಿಗಳ ತಪ್ಪು. ಹೆಣ್ಣು ಹಾಗೂ ಗಂಡುಮಕ್ಕಳಿಗೆ ಮದುವೆ ವಯಸ್ಸಿಗೆ ಬಂದಾಗ ಜೀವನಮೌಲ್ಯದ ಕುರಿತು ತಿಳಿವಳಿಕೆ ಕೊಡಬೇಕಾಗುತ್ತದೆ. ಬಕುಲಳ ಅತ್ತೆ ಪದ್ಮಮ್ಮ ತನ್ನ ಸೊಸೆಗೆ ತನ್ನ ಮನೆಯಲ್ಲಿ ಸಂಸಾರದ ನೌಕೆಯನ್ನು ಹೇಗೆ ತೆಗೆದುಕೊಂಡು ಹೋಗಬೇಕೆಂದು ನಿಧಾನವಾಗಿ ಅರ್ಥ ಮಾಡಿಸಬಹುದಿತ್ತು. ಪದ್ಮಮ್ಮ ಮಗ ಸೊಸೆಯನ್ನು ಬೇರೆ ಮನೆಗೆ ಕಳುಹಿಸುವ ಯೋಚನೆ ಸರಿ ಕಾಣಲಿಲ್ಲ.

—ಎಂ. ಎಸ್. ಉಷಾ ಪ್ರಕಾಶ್, ಮೈಸೂರು

—ರವೀಶ್ ಕುಮಾರ್, ಬೆಂಗಳೂರು

ಜ. 21ರ ಸಂಚಿಕೆಯ ಎರಡು ಲೇಖನಗಳು ಅತ್ಯುತ್ತಮವಾಗಿದೆ. ‘ಸೈಬರ್ ಕಬಂಧ’ ಮತ್ತು ‘ಸಂತಾನ ಭಾಗ್ಯ’. ಲೇಖಕರಾದ ಸುಧೀಂದ್ರ ಪ್ರಸಾದ್ ಮತ್ತು ಡಾ. ವೀಣಾ ಭಟ್ ಅವರು ನಿಜಕ್ಕೂ ಅಭಿನಂದನಾರ್ಹರು. ಸಂತಾನಹೀನತೆ ಬಗ್ಗೆ ಸರಕಾರ, ಆರೋಗ್ಯ ಇಲಾಖೆ ಪರಿಹಾರೋಪಾಯದ ಕುರಿತು ಗಂಭೀರವಾಗಿ ಚಿಂತನೆ ನಡೆಸಬೇಕು. ಅಲಕ್ಷಿಸಿದರೆ ಮುಂದಿನ ಪೀಳಿಗೆಯೇ ನಾಶವಾದೀತು .

—ಎ.ಎನ್. ಭಟ್ಟ, ಬೆಂಗಳೂರು

## ಬದುಕಿಕೊಂದು ನಮಸ್ಕಾರ

ಜ. 21ರ ಸಂಚಿಕೆಯು ಎಂದಿನಂತೆ ಚೆನ್ನಾಗಿದೆ. ‘ಬದುಕಿಗೊಂದು ನಮಸ್ಕಾರ...’ ಗಿರಿಜಾ ಲೋಕೇಶ್ ಸಂದರ್ಶನದಲ್ಲಿ ಅವರ ಜೀವನದ ಪರಿಚಯವನ್ನು ರಘುನಾಥ ಚ.ಹ. ಮತ್ತು ಪದ್ಮನಾಭ ಭಟ್ ಸೊಗಸಾಗಿ ಮಾಡಿದ್ದಾರೆ. ಜೀವನದ ಏಳುಬೀಳುಗಳನ್ನು ನಗುನಗುತ್ತಲೇ ಎದುರಿಸಿ ಜೀವನೋತ್ಸಾಹ ಕಾಪಾಡಿಕೊಂಡಿರುವ ‘70ರ ಹಿರಿಯ ಜೀವ, 20ರ ಹರೆಯದ ಉತ್ಸಾಹದ ಗಿರಿಜಕ್ಕ’ ಎಲ್ಲರಿಗೆ ಮಾದರಿ.

—ಕಮಲಾದೇವಿ ಆರ್. ಹಳ್ಳೂರ್, ಬೆಂಗಳೂರು

## ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿಗೆ ಕೃತಿಗಳ ಆಹ್ವಾನ

ನಾಡೋಜ ಡಾ. ಬರಗೂರು ಪ್ರತಿಷ್ಠಾನವು ‘ಶ್ರೀಮತಿ ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ’ಗೆ ವಿಚಾರ ಸಾಹಿತ್ಯ ಮತ್ತು ಕಾದಂಬರಿ ಪ್ರಕಾರಗಳಿಂದ ಕೃತಿಗಳನ್ನು ಆಹ್ವಾನಿಸಿದೆ. ಆಯ್ಕೆಯಾದ ಕೃತಿಗೆ ತಲಾ ಹತ್ತು ಸಾವಿರ ರೂಪಾಯಿಗಳ ನಗದು, ಫಲಕ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ಆಸಕ್ತರು 2020ರಲ್ಲಿ ಪ್ರಕಟವಾದ ವಿಚಾರ ಸಾಹಿತ್ಯ ಮತ್ತು ಕಾದಂಬರಿ ಪ್ರಕಾರಕ್ಕೆ ಸೇರಿದ ಕೃತಿಗಳ ತಲಾ ಮೂರು ಪ್ರತಿಗಳನ್ನು ಕಳಿಸಿಕೊಡಬಹುದು. ಕಡೆಯ ದಿನಾಂಕ: ಫೆಬ್ರುವರಿ 15. ವಿಳಾಸ: ಡಾ. ಎ.ವಿ. ಲಕ್ಷ್ಮೀನಾರಾಯಣ, ಬೆಳಕು, 2453, 3ನೇ ಬ್ಲಾಕ್, ವಿಶ್ವೇಶ್ವರಯ್ಯ ಬಡಾವಣೆ, ಸೊಣ್ಣೇನಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು–560110 ದೂರವಾಣಿ: 9964640890

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in